

ಹಣ್ಣಿನ ತೋಟಕ್ಕೆ ಗೋಡೆ ರಕ್ಷಣೆ

ಮಾರುಕಟ್ಟೆಗಳಿಗೆ ತಪ್ಪದೇ ಭೇಟಿ ಕೊಡುತ್ತಿದ್ದೆವು. ಅಲ್ಲಿ ಮಾಂಸ, ಹಣ್ಣು, ತರಕಾರಿ, ಗಿಣ್ಣ, ಜೇನುತುಪ್ಪ ಎಲ್ಲವೂ ಭೇದವಿಲ್ಲದೆ ಅಕ್ಕಪಕ್ಕ ಇರುವುದನ್ನು ಕಂಡೆವು. ಭಾರತದ ಮಾರುಕಟ್ಟೆಗಳಲ್ಲಿ ಅವುಗಳಿಗೆ ಪ್ರತ್ಯೇಕ ಜಾಗಗಳುಂಟು. ಆದರೆ ಮಾಲುಗಳು ಈಗೀಗ ಈ ಭಿನ್ನಭೇದವನ್ನೂ ಒಡೆದುಹಾಕುತ್ತಿವೆ.

ಇರಾನಿನ ಮರುಭೂಮಿಯಲ್ಲಿ ಹಿಮದ ಶಾಲನ್ನು ಹೊದ್ದ ಪರ್ವತಗಳು ನಮ್ಮನ್ನು ಚಕಿತಗೊಳಿಸಿದವು. ಹಿಮ ಕರಗಿ ಕೆಳಸ್ತರಕ್ಕೆ ಹರಿದು ಹಣ್ಣಿನ ತೋಟಪಟ್ಟಿಗಳನ್ನು ಸೃಷ್ಟಿಸಿತ್ತು. ಪರ್ವತ ಬುಡದಲ್ಲಿದ್ದ ಕಾರಖಾನ್ ಎಂಬ ಊರಲ್ಲಿ ಹಿಮಕರಗಿದ ನೀರು ಊರೊಳಗಿನ ಕಾಲುವೆಗಳಲ್ಲಿ ಹರಿಯುತ್ತಿತ್ತು. ಇರಾನಿನ ಅನೇಕ ಸಂತರು ನೀರು ಬೆಟ್ಟದ ಮೇಲೆ ಚಿಲುಮೆ ಉಕ್ಕಿಸುವ ಪವಾಡ ಮಾಡಿದ ಕತೆಗಳಿವೆ. ಸೂಫೀಕವಿ ಅತ್ತಾರನ ಸಮಾಧಿಯಿರುವ ನಿಶಾಪುರದಲ್ಲಿ, ಇಂತಹದೊಂದು ಚಿಲುಮೆಯನ್ನು ನೋಡಿದೆವು. ಮರುಭೂಮಿಯಲ್ಲಿ ನೀರೇ ದೇವರು. ಹೀಗಾಗಿಯೇ ಇಲ್ಲಿನ ಶಿಲ್ಪಕಲೆಯಲ್ಲಿ ಯಥೇಚ್ಛ ನೀರಿನ ಹೂಜಿಗಳಿವೆ. ನೀರುಳ್ಳ ಚರ್ಮದ ಚೀಲ ಹೊತ್ತು ಬಾಯಾರಿದವರಿಗೆ ಹಂಚುವವರ ಪ್ರತಿಮೆಗಳಿವೆ. ಕುಡಿಯಲು ನೀರನ್ನು ಕೊಡದೆ ಹಸನರನ್ನು ಕೊಂದ ಕರ್ಬಲಾ ಕದನದ ಚರಿತ್ರೆಯು, ಬಾಯಾರಿದವರಿಗೆ ನೀರು ಕುಡಿಸುವುದನ್ನು, ಹಣ್ಣು ತಿನ್ನಿಸುವುದನ್ನು ಪವಿತ್ರ ಆಚರಣೆಯಾಗಿಸಿದೆ. ಮರುಭೂಮಿ ದೇಶಗಳಲ್ಲಿರುವ ನದಿ ಓಯಸಿಸ್ ಹಿಮಪರ್ವತಗಳಿಗೂ, ಹಣ್ಣಿನ ತೋಟಗಾರಿಕೆಗೂ, ಹಣ್ಣಿನ ವ್ಯಾಪಾರ ಮತ್ತು ಅತಿಥಿ ಸತ್ಕಾರದ ಸಂಸ್ಕೃತಿಗಳಿಗೂ ಕರುಳಬಳ್ಳಿ ನಂಟು. ಇಲ್ಲಿನ



ಮಾರಾಟಕ್ಕಿಟ್ಟ ಕೇಸರಿ

ಹಣ್ಣುಗಳನ್ನು ನೋಡುವಾಗ 'ಬಾಬರ್ ನಾಮಾ'ದ ನೆನಪಾಗುತ್ತದೆ. ಉಜ್ಬೆಕಿಸ್ತಾನದ ಸಮರಖಂಡದಿಂದ ಬಂದ ಬಾಬರ್, ತನ್ನ ಆತ್ಮಕಥೆಯಲ್ಲಿ ತಾಯ್ನಾಡಿನ ಹಣ್ಣಿನ ತೋಟಗಳನ್ನೂ ಚಿಲುಮೆಗಳನ್ನೂ ಹಣ್ಣುಗಳ ರುಚಿಯನ್ನೂ ಮತ್ತೆಮತ್ತೆ ಕನವರಿಸುತ್ತಾನೆ.

ಹಣ್ಣಿಗೆ ಹೋಲಿಸಿದರೆ ಮರುಭೂಮಿ ದೇಶಗಳಲ್ಲಿ ಪುಷ್ಪಕೃಷಿ ಕಡಿಮೆ. ಜನ ತಲೆಗೆ ಹೂ ಮುಡಿಯುವುದಿಲ್ಲ. ಆದರೆ ಹುತಾತ್ಮರ, ಸಂತರ ಸಮಾಧಿಗಳಿಗೆ ಹೂಗುಚ್ಛ ಅರ್ಪಿಸುವ ಸಂಸ್ಕೃತಿ ಇರಾನಿನಲ್ಲಿ ಮಾತ್ರ ಕಾಣುತ್ತದೆ. ಮರುಭೂಮಿಯ ಎರಡು ಹೂವುಗಳು ವಾಣಿಜ್ಯ ಮೌಲ್ಯವುಳ್ಳವು. ಮೊದಲನೆಯದು– ಅತ್ತರನ್ನು ಉತ್ಪಾದಿಸುವ ಗುಲಾಬಿ. ಅರೇಬಿಯಾದ ತಾಯಿಫ್ ನಗರದಲ್ಲಿ ಗುಲಾಬಿ ಉತ್ಸವಕ್ಕೆಂದೇ ನಾವು ಹೋಗಿದ್ದೆವು. ಗುಲಾಬಿಯ ಒಣಪಕಳೆಗಳನ್ನು ಚಹಪುಡಿಯ ಜತೆಗೆ ಬೆರೆಸಿ ಮಾರುವ ಅಂಗಡಿಗಳು ಇಲ್ಲಿ ಸಾಮಾನ್ಯ. ಎರಡನೆಯದು– ಆಹಾರ–ಪಾನೀಯ



ಇರಾನಿನ ಬಸ್ತಾಂನಲ್ಲಿ ಹಿಮಪರ್ವತ




ಸೂಫಿ ದರ್ಗಾದಲ್ಲಿ ಹಂಚಲು ತಂದ ಹಣ್ಣು



ಫಲವಂತಿಕೆಗೆ ಕಾರಣವಾಗಿರುವ ತಿಗ್ರಿಸ್ ನದಿ